**2016 (A)**
**( NEW SYLLABUS )**

| | |
|---|---|
| *Roll No.* :<br>ನೊಂದಣಿ ಸಂಖ್ಯೆ : | *Subject Code* :<br>ವಿಷಯ ಸಂಖ್ಯೆ : **01 (N/S)** |
| *Duration* : 3 Hrs. 15 Minutes<br>ಸಮಯ : 3 ಗಂಟೆ 15 ನಿಮಿಷಗಳು | *Q.P. Serial No.* : 441990<br>ಪ್ರ.ಪ. ಯ ಕ್ರಮ ಸಂಖ್ಯೆ : |
| *No. of Pages* : 7<br>ಪುಟಗಳ ಸಂಖ್ಯೆ : 7 | *Full Marks* : 100<br>ಒಟ್ಟು ಅಂಕಗಳು : 100 |

# KANNADA

# ಕನ್ನಡ

*Instructions :* *This question paper has been sealed by reverse jacket. You have to cut to open the paper at the time of commencement of the examinations. Check whether all the pages of the question paper are intact.*

*ಸೂಚನೆಗಳು :* ಈ ಪ್ರಶ್ನೆ ಪತ್ರಿಕೆಯನ್ನು ರಿವರ್ಸ್ ಜಾಕೆಟ್ ಮೂಲಕ ಸೀಲ್ ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆ ಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆ ಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

***General Instructions to the Candidate :***

***ಪರೀಕ್ಷಾರ್ಥಿಗಾಗಿ ಸರ್ವಸಾಮಾನ್ಯ ಸೂಚನೆಗಳು :***

1. *Candidates are required to give their answers in their own words as far as practicable.*
   ಪರೀಕ್ಷಾರ್ಥಿಯು ಸಾಧ್ಯವಾದಷ್ಟು ತಮ್ಮ ಸ್ವಂತ ಪದಗಳಲ್ಲಿಯೇ ಉತ್ತರಿಸಬೇಕು.

2. *Figures in the right hand margin indicate full marks.*
   ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪೂರ್ಣಾಂಕಗಳನ್ನು ತೋರಿಸುತ್ತದೆ.

3. *While answering the candidate should adhere to the word limit as far as practicable.*
   ಪರೀಕ್ಷಾರ್ಥಿಯು ಉತ್ತರಿಸುವ ಸಮಯದಲ್ಲಿ ಸಾಧ್ಯವಾದಷ್ಟುಮಟ್ಟಿಗೆ ಉತ್ತರವು ಶಬ್ದಗಳ ಪರಿಮಿತಿಯೊಳಗೆ ಇರುವಂತೆ ಗಮನಿಸುವುದು.

4. *15 minutes of extra time have been allotted for the candidates to read the questions.*
   ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

## ಅ – ವಿಭಾಗ

I. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : $10 \times 1 = 10$

1. ಪರಿಮಳವನ್ನು ಯಾವುದರಿಂದ ಅರಿಯಬಹುದು ?
2. ದುರ್ಗಂಧ ಬಿಡದಿರುವುದು ಯಾವುದು ?
3. ಮುದುಕಿಯು ಯಾವ ದೇವರಿಗೆ ಹರಕೆ ಹೊತ್ತಳು ?
4. ಕವಯಿತ್ರಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ ?
5. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು ?
6. ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕ ಸಾಕ್ಷಿಯಾಗಿತ್ತು ?
7. ಕನ್ನಡವು ಕಸ್ತೂರಿಯಲ್ಲವೆ! ಎಂದವರಾರು ?
8. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು ?
9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು ?
10. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ ?

## ಆ – ವಿಭಾಗ

II. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : $4 \times 2 = 8$

11. ದ್ರೌಪದಿ ತಾನು ಘೋರತರ ವಿಷ ಕುಡಿಯುವುದಾಗಿ ಏಕೆ ಹೇಳುತ್ತಾಳೆ ?
12. ಯಾರಿಂದ ಯಾವುದನ್ನು ಹೇಗೆ ಕಲಿಯಬೇಕೆಂದು ಸೋಮನಾಥನು ಹೇಳಿದ್ದಾನೆ ?

13. ಹಿತ್ತಾಳಿಗಿಂತ ಬಲುಹೀನ ಯಾವುದು ?

14. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ ?

15. ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ ?

ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

$3 \times 2 = 6$

16. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?

17. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು ?

18. ಕಮಲ ಮೇಡಂ ವೈದ್ಯರ ಯಾವ ಸಲಹೆಗಳನ್ನು ರೂಢಿಸಿಕೊಂಡರು ?

19. ಮನೋರಮೆ ಮುದ್ದಣನನ್ನು ಹೇಗೆ ಉಪಚರಿಸಿದಳು ?

ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

$3 \times 2 = 6$

20. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ ?

21. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು ?

22. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸುಮುರುಸಿನಿಂದ ಏನು ಹೇಳಿದ ?

23. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?

## ಇ – ವಿಭಾಗ

III. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ವಿವರಿಸಿ : $2 \times 3 = 6$

24. ರುಘುತನೂಜನಾಯುಃ ಪ್ರಾಣಂಬರೆಗಂ ಬಾರದಿರು.

25. ಮೂಲಾಗ್ರ ಪರಿಯಂತ ಮುಳ್ಳುಕೂಡಿಪ್ಪಂತೆ.

26. ಮುಳುಗಿರಲಿ ಮುಪ್ಪು ಚಿಂತನದಿ.

ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : $1 \times 3 = 3$

27. ಆಪರೇಷನ್ ಆಗಬೇಕು, ಪರವಾಗಿಲ್ಲವಾ ?

28. ಇದೇ ಲೋಟವಲ್ಲವೇ.... ತನ್ನ ಬೆವರಿನ ಬೆಲೆ ಕಳೆದದ್ದು.

ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : $1 \times 3 = 3$

29. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.

30. ಈ ಕಂಬದೊಳ್ಗೆ ಏನೋ ಸೇರ್ಕೊಂಡಿದೆ.

## ಈ – ವಿಭಾಗ

IV. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

32. ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು ?

33. 'ಮುಂಬೈ ಜಾತಕ'ದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ ?

34. 'ಒಂದು ಹೂ ಹೆಚ್ಚಿಗೆ ಇಡುತೀನಿ' ಕವಿತೆಯಲ್ಲಿ ವೃದ್ಧರ ತವಕ–ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ ?

ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2 × 4 = 8

35. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ ?

36. ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಚೆನ್ನೈನ ಪತ್ರಿಕಾಗೋಷ್ಠಿಯಲ್ಲಿ ಕಲಾಂ ಹೇಳಿದ್ದೇನು ? ವಿವರಿಸಿ.

37. ಹಳ್ಳಿಯ ಚಹಾಫಳಾರದಂಗಡಿಯನ್ನು ಪರಿಚಯಿಸಿ.

ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2 × 4 = 8

38. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

39. ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ ?

40. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ ?

## ಉ – ವಿಭಾಗ

V. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ : 1 × 5 = 5

41. ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲುಬಾರದು,
ಏರಿ ನೀರುಂಬಡೆ, ಬೇಲಿ ಕೆಯ್ಯುಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ!

42. ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು
ಎನ್ನವೊಲು ಪಾಂಡವರವೊಲು ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು

## ಭಾಷಾಭ್ಯಾಸ

VI. ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಆರಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ : 6 × 2 = 12

43. ಈ ಪದಗಳಿಗೆ ಅರ್ಥವನ್ನು ಬರೆಯಿರಿ :

    ತಮ, ಪಂಕ.

44. ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ :

    ಕಳೆ, ದೊರೆ.

45. ಈ ಪದಗಳಿಗೆ ತದ್ಭವ ರೂಪ ಬರೆಯಿರಿ :

    ವೀರ, ಕಸ್ತೂರಿ.

46. ಈ ಪದಗಳಿಗೆ ಗುಣವಾಚಕಗಳನ್ನು ಗುರುತಿಸಿ :

    ಕಲಿಭೀಮ, ಹಿತವಚನ.

47. ಈ ಕೆಳಗಿನ ಕ್ರಿಯಾಪದಗಳ 'ಧಾತು' ಗುರುತಿಸಿ :

    ಓದುವನು, ಹೋದರು.

48. ಇವುಗಳನ್ನು ನಿಷೇಧ ರೂಪದಲ್ಲಿ ಬರೆಯಿರಿ :

    ಹಾಡುವನು, ಬರುವುದು.

49. ಇವುಗಳ ವಿಭಕ್ತಿಯ ಹೆಸರನ್ನು ಬರೆಯಿರಿ :

    ಗುರುವಿಗೆ, ಲಾವಾರಸದಲ್ಲಿ.

ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು ಪ್ರಬಂಧವನ್ನು ಬರೆಯಿರಿ : 1 × 5 = 5

50. ಮೂಢನಂಬಿಕೆಗಳು.

51. ರಕ್ತದಾನ ಮತ್ತು ನೇತ್ರದಾನಗಳ ಮಹತ್ವ.

ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ : $1 \times 4 = 4$

52. ಪರೀಕ್ಷಾ ಸಿದ್ಧತೆ ಕುರಿತು ನಿಮ್ಮ ಗೆಳೆಯ / ಗೆಳತಿಗೆ ಪತ್ರ ಬರೆಯಿರಿ.

53. ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರ ನೀಡುವಂತೆ ಕೋರಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.

ಈ) ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ **ಒಂದನ್ನು** ವಿಸ್ತರಿಸಿ ಬರೆಯಿರಿ : $1 \times 4 = 4$

54. ದೇಶ ಸುತ್ತಬೇಕು, ಕೋಶ ಓದಬೇಕು.

55. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.